# ಆಹಾ ಸುದ್ದಿ!

★ ಸಸಿತೋಟ



ಗೋರಿಲ್ಲಾಗಳು ಎರಡು ಕಾಲುಗಳ ಮೇಲೆ ಮನುಷ್ಯರಂತೆ ಓಡಾಡುವುದು ಅಪರೂಪವೇನಲ್ಲ. ಆದರೆ ಫಿಲಿಡೆಲ್ಫಿಯ ಮೃಗಾಲಯದ ಗೋರಿಲ್ಲಾ ಲೂಯಿಸ್ ಪದೇ ಪದೇ ಮಾನವರಂತೆ ವರ್ತಿಸುವುದು ಯಾಕೆ ಎಂಬುದು ಈಗ ಬಹಿರಂಗವಾಗಿದೆ. ಎರಡೂ ಕೈಗಳಲ್ಲಿ ತಿಂಡಿತಿನಿಸು ತುಂಬಿದಾಗ, ಮಣ್ಣಿನಲ್ಲಿ ಓಡಾಡುವ ಪ್ರಸಂಗ ಬಂದರೆ ಕೈಗಳು ಹೊಲಸಾಗುವುದೆಂದು ಈ ರೀತಿ ಓಡಾಡುತ್ತದಂತೆ. ಮಾನವ ಮಂಗನಂತಾಡಿದರೆ, ಅವುಗಳಾದರೂ ಮಾನವನಂತಾಗಬೇಕಲ್ಲವೇ?



ಇಂಡೋನೇಷಿಯಾದ ಸೂಪರ್ ಮಹಿಳೆ ಮುರ್ನಿ. ನಿತ್ಯ ನದಿಯಲ್ಲಿ ನಾಲ್ಕು ಕಿ.ಮೀ. ಈಜಿ ಕುಡಿಯಲು ಶುದ್ಧ ನೀರನ್ನು ತರುವ ಈಕೆ ಬೆನ್ನಿಗೆ 200 ಹೂಜಿಗಳನ್ನು ಕಟ್ಟಿಕೊಂಡು ಈಜುತ್ತಾಳಂತೆ.

ರಾಜಸ್ಥಾನದ ಪ್ರತಾಪಗಢದ ರೈತರು ಹೊಲದ ತುಂಬ ಅಫೀಮು ಬೆಳೆಯುತ್ತಿದ್ದಾರಂತೆ. ಆದರೆ ಅವರಿಗೆ ಕಾಟ ಕೊಡುತ್ತಿರುವುದು ಪೊಲೀಸರಲ್ಲ, ಬದಲಿಗೆ ಹಸಿರು ಮೈ, ಕೆಂಪು ಮೂತಿಯ ಗಿಳಿಗಳು. ಚೆನ್ನಾಗಿ ಅಫೀಮು ತಿಂದು ಮತ್ತೇರಿ ಅಲ್ಲೇ ಬೀಳುತ್ತವಂತೆ. ನಶೆ ಇಳಿದ ಬಳಿಕ ಪುರ್ರನೆ ಹಾರಿ ಹೋಗುತ್ತವೆ. ರೈತರು ಮಾತ್ರ ಗಿಳಿಗಳ ಕಾಟ ತಡೆಯುವ ಉಪಾಯ ಹೊಳೆಯದೇ ಮೈ ಪರಚಿಕೊಳ್ಳುತ್ತಿದ್ದಾರಂತೆ.

ಬೆಂಗಳೂರಿನಿಂದ ಉತ್ತರ ಕೊರಿಯಾಗೆ ಹೋಗಬೇಕೆ? ಓಲಾ ಕ್ಯಾಬ್ ಸೇವೆ ನಿಮಗಾಗಿ ಕಾದಿದೆ. ಹೌದು, ಬೆಂಗಳೂರಿನ ವಿದ್ಯಾರ್ಥಿ ಪ್ರಶಾಂತ್ ಷಾಹಿ ಐದು ದಿನಗಳ ಈ ಪಯಣಕ್ಕೆ ಓಲಾ ಕ್ಯಾಬ್ ಬುಕ್ ಮಾಡಿದ್ದಾನಂತೆ. ಹೋಗಿ ಬರಲು ನೀಡಬೇಕಾದ ಹಣ 1.5 ಲಕ್ಷ ರೂಪಾಯಿ. ಇನ್ನೂ ಜಗತ್ತಿಗೆ ಅಪರಿಚಿತವಾಗಿ ಉಳಿದುಕೊಂಡ ಉ.ಕೊರಿಯಾಗೆ ಪಯಣವನ್ನು ಈತ ಒಂದು ಕ್ಲಿಕ್‌ನಲ್ಲಿ ಸಾಧಿಸಿದ್ದಾನೆ.



ಅಮೆಝಾನ್ ಸ್ಥಾಪಕ ಜೆಫ್ ಬೆಝೋಸ್ ತನ್ನ ಕಚೇರಿಯ ಹೊರಗೆ ಮುದ್ದಿನ ನಾಯಿಯ ಜೊತೆ ಅಡ್ಡಾಡುವ ಚಿತ್ರ ವೈರಲ್ ಆಗಿದೆ. ಈ ಸ್ಪಾಟ್‌ಮಿನಿ ಎಂಬ ಹೆಸರಿನ ನಾಯಿ ಮರಿ ರೊಬಾಟ್. ಮೆಟ್ಟಿಲೇರುವುದು, ಎಸೆದ ವಸ್ತುಗಳನ್ನು ಹಿಡಿಯುವುದು, ಬಾಗಿಲು ತೆರೆಯುವುದು.. ಎಲ್ಲವನ್ನೂ ಮಾಡುತ್ತದಂತೆ, ಥೇಟ್ ನಾಯಿಯ ಹಾಗೆ. ಆದರೆ ಅಪರಿಚಿತರು ಹಾಕಿದ ಬಿಸ್ಕತ್ ತಿಂದು ಬಾಲವಾಡಿಸುತ್ತದೆಯೇ? ಆಗ ಮಾತ್ರ ನಿಜವಾದ ನಾಯಿ ನೋಡಿ.



ಚೀನಾದ ಖಾಲಿ ಕ್ವಾರಿಗಳಲ್ಲಿ ಹೋಟೆಲ್‌ಗಳು ಎದ್ದಿವೆಯಂತೆ. ನೆಲದ ಮೇಲಿಷ್ಟು, ನೆಲದೊಳಗೆ, ನೀರಿನೊಳಗೆ.. ಎಂದೆಲ್ಲ ನಿರ್ಮಾಣ ನಡೆಯುತ್ತಿದೆಯಂತೆ. ಇಲ್ಲಿಯ ಗಣಿ ದೊರೆಗಳ ಬೊಕ್ಕಸ ತುಂಬಿಸಲು ಹೊಸ ಐಡಿಯ ದೊರೆತಿರಬಹುದು.